# ಮುಸ್ಸಂಜೆಯ ಬೆಳಕು

೧೯೧೬ನೆ  ಇಸವಿಯಲ್ಲಿ ನೆಟ್ಟಾರು ಅಪ್ಪಯ್ಯ, ನಾರಾಯಣ ಭಟ್ಟರ ಧರ್ಮಪತ್ನಿ ಹೊನ್ನಮ್ಮನ ಗರ್ಭದಲ್ಲಿ ದ್ವಿತೀಯ ಪುತ್ರನಾಗಿ ಜನಿಸಿದ ಕೆಳನೆಟ್ಟಾರು ರಾಮಚಂದ್ರ ಭಟ್ಟರು ಚಂದ್ರಣ್ಣ ಎಂದೇ ಪ್ರಚಲಿತದಲ್ಲಿದ್ದವರು ಇವರು. ಎಲ್ಲರಂತೆ ಗ್ರಹಸ್ಥರಾಗಿದ್ದು ಎಲ್ಲಾ ವ್ಯವಹಾರವನ್ನು ಮಾಡುತ್ತಿದ್ದರು.

೫೨ನೇ ಇಸವಿಯಲ್ಲಿ ಇವರಲ್ಲಿ ಒಂದು ಬದಲಾವಣೆಯಾಯಿತು.

ಒಂದು ರಾತ್ರಿ ಇವರು ಬೆಳ್ಳಾರೆಗೆ ಹೋಗಿಬರುವಾಗ ನೆಟ್ಟಾರು ಚಾವಡಿ ಬಾಗಿಲು ಜಾತ್ರೆ ಆಗುವ ಸ್ಥಳದಲ್ಲಿ ಬಿದ್ದರು.

ಅಲ್ಲಿಂದ ಅವರು ಎದ್ದು ಅಲ್ಲಿ ಕೆಳಗಿನ ಬಯಲಿನಲ್ಲಿ ವಾಸಿಸುತ್ತಿದ್ದ ಪೊಮ್ಮೆಚ್ಚಣ್ಣನ ಮನೆಗೆ ಬಂದರು.ಮರುದಿವಸ ಅವರನ್ನು ಅವರ ಮನೆಗೆ ಕರೆದುಕೊಂದು ಹೋದರು.

ಅಲ್ಲಿಂದ ಅವರಿಗೆ ಬಾಹ್ಯವೂ ಅಗೋಚರವಾಯ್ತು.ಅವರು ಇನ್ನು ಯಾವುದೋ ಪ್ರಪಂಚದಲ್ಲಿ ಇದ್ದರು.

ನಾನು ಇದ್ದವನು ಅಲ್ಲ-ಬಂದವನು ಎಂದು ಹೇಳಲು ಪ್ರಾರಂಭಿಸಿದರು. ಮನೆಯವರು ಹಲವಾರು ಮಾಂತ್ರಿಕರಿಂದ ಮಂತ್ರವಾದ ಮಾಡಿಸಿದರು ಮತ್ತು ಬೆಂಗಳೂರು ಮೆಂಟಲ್ ಆಸ್ಪತ್ರೆಯಲ್ಲಿ ಮದ್ದು ಮಾಡಿಸಿದರು.ಇದರಿಂದ ಏನೂ ಉಪಯೋಗವಾಗಲಿಲ್ಲ.

ಇವರು ಒಬ್ಬ ಹುಚ್ಚ ಎಂದೇ ಪರಿಗಣಿಸಲ್ಪಟ್ಟರು.

ಅವರ ಮನೆಯ ಪಕ್ಕವೇ ನಮ್ಮ ಮನೆ.ಅವರು ನಮ್ಮಲ್ಲಿ ಬಂದು ನನ್ನಲ್ಲಿ ನಾನು ಯಾರು ಹೇಳು ಎಂದು ಹೇಳುತಿದ್ದರು.

ಈ ಮಾತು ಈ ಧ್ವನಿ ಎಲ್ಲಿಂದ ಬರುತ್ತಿತ್ತು. ಮೂರನೇ ವಲಯದಿಂದ.ಇದು ನಿಜವೇ ಎಂದು ನೀವು ನನ್ನಲ್ಲಿ ಕೇಳಿದರೆ ನೀವು ಮೂರನೇ ವಲಯಕ್ಕೆ ಬಂದರೇ ಗೊತ್ತಾಗಬಹುದು.ನಾನು ನಾನಲ್ಲ.ನೀನು ನೀನಲ್ಲ.ನಾನು ಯಾರು ಎಂದು ಹೇಳಿ ಎಂದು ಪ್ರಶ್ನಿಸುತ್ತಿದ್ದರು.

ಹಣವೇ ಆಗಲಿ, ಹಣಕ್ಕೆ ಸಂಬಂಧಿಸಿದ ವಿಷಯವನ್ನು ಮಾತನಾಡಿದರೆ ಅವರು ಎದ್ದು ಹೋಗುತ್ತಿದ್ದರು.

ಮಾನವನ ಆಯುಷ್ಯ ಪ್ರಮಾಣದಲ್ಲಿ- ೧೨೦ರಲ್ಲಿ-೯೧ ವರುಷವನ್ನು ಪೂರೈಸಿ ೨೦೦೭ ಮಾರ್ಚ ತಿಂಗಳು ೧೧ರ ರಾತ್ರಿ ಕರ್ಮಬಂಧನದ ರಾಮಚಂದ್ರಭಟ್ಟ-ಅಜ್ಜ-ಈ ದೇಹದಿಂದ ವೈಜ್ಞಾನಿಕ ಚಿಕಿತ್ಸೆಯಿಂದ ಬಿಡುಗಡೆಗೊಂಡು ಪುತ್ತೂರಿನ ಕೆಮ್ಮಾಯಿಯ ಆನಂದಕುಟೀರದಲ್ಲಿ ಅವರ ಸಂದೇಶದಂತೆ ಅವರ ಆದೇಶಪ್ರಕಾರ ನಿರ್ಮಾಣ ಮಾಡಿದ ಸಮಾಧಿಯಲ್ಲಿ ಎಲ್ಲರೂ ಸೇರಿ ಅವರ ದೇಹವನ್ನು ಇರಿಸಲಾಯಿತು.

ಆದರೆ ಅವರ ಇಡೀ ಮಾತಿನ ಸಾರ –ವ್ಯವಹಾರವೇ ಪಾರಮಾರ್ಥ ಎಂದು.

ಈ ಮೃತ್ಯುಪ್ರಪಂಚದ ಜೀವಾತ್ಮನಿಗೆ ಸುಖ ಬೇಕು, ಸಂಪತ್ತು ಬೇಕು ಆನಂದಿಸಬೇಕು ಎಂದು ಇದ್ದೇ ಇದೆ.

ಆದರೆ ನಮ್ಮ ಕೊನೆ ಎಲ್ಲಿ? ನಮ್ಮ ಆದಿ ಎಲ್ಲಿ? ಎಂದು ನಾವು ತಿಳಿಯುವುದಿಲ್ಲ.

ಸಣ್ಣ ಪ್ರಾಯದಲ್ಲಿ ಬಂಧು ಬಳಗ ತಂದೆ ತಾಯಿ ಇವರ ಜೊತೆ ನಾವು ಬೆರೆತು ಬಾಳುತ್ತೇವೆ.

ವಿದ್ಯಾರ್ಥಿ ಜೀವನ ಗುರು , ಸಹಪಾಠಿಗಳ ಜೊತೆ ಮತ್ತು ಪುಸ್ತಕಗಳ ಜೊತೆ ಇರುತ್ತೇವೆ.

ವಿದ್ಯಾಭ್ಯಾಸ ಮುಗಿಸಿ ನಾವು ಕೃಷಿಕರಾಗಿದ್ದಲ್ಲಿ ಕೃಷಿಯ ಕಡೆ ಗಮನ ಕೊಡುತ್ತೇವೆ ಅಥವಾ ಇನ್ನು ನಾವು ಓದಿದ ವಿದ್ಯೆಗೆ ಅನುಸರಿಸಿ ಉದ್ಯೋಗ ನೋಡುತ್ತೇವೆ. ಇದು ಸಮಜದ ವ್ಯವಸ್ಥೆ. ಆದರೆ ಇಷ್ಟೆಲ್ಲಾ ಆದರೂ ನಾವು ಯಾರೆಂದೇ ತಿಳಿದಿರುವುದಿಲ್ಲ. ಅಜ್ಜನವರು ಅದಕ್ಕಾಗಿಯೇ ನಾನು ಯಾರು ಹೇಳಿ ಎಂದು ಪ್ರಶ್ನಿಸುತ್ತಿದ್ದರು.

ಗೋಪಾಲ ಭಟ್